ಚಾಂಪಿಯನ್ ಆದರು. ಮೂರು ವರ್ಷಗಳ ನಂತರ ಅವರು ಫಿಷರ್ ಅವರಿಗೆ ಮಣಿದರು.

ಐಸ್‌ಲ್ಯಾಂಡಿನ ರಾಜಧಾನಿ ರೆಕ್ಯವಿಕ್‌ನಲ್ಲಿ 1972ರ ಆ ವಿಶ್ವಪ್ರಸಿದ್ಧ ಹಣಾಹಣಿ ನಡೆದಿತ್ತು. ಸ್ಪಾಸ್ಕಿ 12 ದಿನಗಳ ಮೊದಲೇ ಅಲ್ಲಿಗೆ ಬಂದಿಳಿದಿದ್ದರು. ಕ್ಯಾಲಿಫೋರ್ನಿಯಾದ ಪಸಡೇನಾದಲ್ಲಿ ಫಿಷರ್ ಫೈನಲ್‌ಗೆ ಸಿದ್ಧತೆ ನಡೆಸಿದ್ದರು. ಆದರೆ ಚಾಂಪಿಯನ್‌ಷಿಪ್‌ನಲ್ಲಿ ಆಡಲು ಒಂದೊಂದೇ ಷರತ್ತುಗಳನ್ನು ಹೇರತೊಡಗಿದರು. ಬಹುಮಾನ ನಿಧಿ ಹೆಚ್ಚಿಸದೇ ಹೋದರೆ ರೆಕ್ಯವಿಕ್‌ಗೆ ಹೋಗುವುದಿಲ್ಲ ಎಂದು ಹಟಹಿಡಿದರು. ಬ್ರಿಟನ್‌ನ ಚೆಸ್ ಪ್ರಮೋಟರ್ ಜೇಮ್ಸ್ ಸ್ಲೇಟರ್ ಅವರು ಆಗಿನ ಕಾಲದಲ್ಲೇ ಬಹುಮಾನ ಮೊತ್ತಕ್ಕೆ 1,25,000 ಡಾಲರ್ ಸೇರಿಸಿದರು. ಮೂರು ದಿನ ಇರುವಾಗಲೂ ಅವರು ಐಸ್‌ಲ್ಯಾಂಡಿಗೆ ತೆರಳಿರಲಿಲ್ಲ. ವರದಿಗಳ ಪ್ರಕಾರ ವಿಮಾನ ನಿಲ್ದಾಣದಲ್ಲಿದ್ದ ಅವರ ಮನವೊಲಿಕೆಗೆ ಸ್ವತಃ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಹೆನ್ರಿ ಕಿಸಿಂಜರ್ ಅವರೇ ಫೋನ್ ಕರೆ ಮಾಡಬೇಕಾಯಿತಂತೆ.

ಇದರ ಜೊತೆಗೆ ಆಡುವ ಸ್ಥಳದಲ್ಲಿ ಬೆಳಕು, ಆಸನದ ಕುಶನ್, ಕ್ಯಾಮೆರಾ ಸದ್ದಿಗೆ ಸಂಬಂಧಿಸಿಯೂ ಫಿಷರ್ ತಕರಾರು ತೆಗೆದರು. ಇದೆಲ್ಲವನ್ನೂ ಸಹಿಸಿಕೊಂಡು ಸ್ಪಾಸ್ಕಿ ಆಟದ ಕಡೆಗಷ್ಟೇ ಗಮನಹರಿಸಿದರು.

ಮೊದಲ ಆಟದಲ್ಲಿ ಫಿಷರ್ ಸಾಮಾನ್ಯ ಲೋಪವೆಸಗಿ ಸೋತರು. ಎರಡನೇ ಪಂದ್ಯಕ್ಕೆ ಫಿಷರ್ ನಿಗದಿತ ದಿನ ಬರಲಿಲ್ಲ. ಕ್ಯಾಮೆರಾಗಳಿಂದ ತಮ್ಮ ಏಕಾಗ್ರತೆಗೆ ತೊಂದರೆ ಆಗುತ್ತಿದೆ ಎಂಬುದು ಅವರ ಕಾರಣ. ಹೀಗಾಗಿ ಸ್ಪಾಸ್ಕಿ ಅವರನ್ನು ಆ ಆಟದ ವಿಜಯಿ ಎಂದು ಘೋಷಿಸಲಾಯಿತು. ಆದರೆ ಫಿಷರ್ ಅವರ ಈ ವರ್ತನೆಯನ್ನು ಸ್ಪಾಸ್ಕಿ ತಂಡದವರಿಗೆ ಸಹಿಸಲು ಆಗಲಿಲ್ಲ. ಮೂರನೇ ಆಟವನ್ನು ದೊಡ್ಡ ಸಭಾಂಗಣದ ಬದಲು ಕಿರಿದಾದ ಟೇಬಲ್ ಟೆನಿಸ್ ಕೊಠಡಿಗೆ ಸ್ಥಳಾಂತರಿಸಲಾಯಿತು. ಮೊದಲ ಬಾರಿ ಫಿಷರ್ ಗೆದ್ದರು. ಐದು ಮತ್ತು ಆರನೇ ಆಟದಲ್ಲೂ ಗೆದ್ದು ತಮ್ಮ ಪ್ರತಿಭೆಯನ್ನು ತೆರೆದಿಟ್ಟರು.

ಜುಲೈ 11ರಂದು ಆರಂಭವಾದ ಈ ಸೆಣಸಾಟ ಸೆಪ್ಟೆಂಬರ್ 3ರಂದು ಕೊನೆಗೊಂಡು ಅಂತಿಮವಾಗಿ ಫಿಷರ್ 12.5–8.5 ಅಂತರದಿಂದ ಗೆದ್ದರು. ಅಲ್ಲಿಗೆ ದೀರ್ಘ ಸಮಯದ ಸೋವಿಯತ್ ಏಕಸ್ವಾಮ್ಯ ಕೊನೆಗೊಂಡಿತು.

ಪಂದ್ಯದ ನಂತರ ಅಸೋಸಿಯೇಟೆಡ್ ಪ್ರೆಸ್ ವರದಿಗಾರ ಮಾಡಿದ ಸಂದರ್ಶನದಲ್ಲಿ ಸ್ಪಾಸ್ಕಿ ಉತ್ತರಗಳು ಆಸಕ್ತಿಕರವಾಗಿದ್ದವು. ಚಾಂಪಿಯನ್ ಪಟ್ಟ ಕಳೆದುಕೊಂಡಿದ್ದಕ್ಕೆ ನಿರಾಶೆಯಾಗಿದೆಯೇ ಎಂಬ ಪ್ರಶ್ನೆಗೆ ‘ನನಗೆ ನಿರಾಶೆಯಾಗಿಲ್ಲ. ಆದರೆ ನನ್ನ ಜೀವನ ಇನ್ನು ನಿರಾಳವಾಗಲಿದೆ. 1969ರಲ್ಲಿ ಚಾಂಪಿಯನ್‌ಷಿಪ್ ಗೆದ್ದಾಗ ನಾನು ಕಷ್ಟದ ಪರಿಸ್ಥಿತಿಯನ್ನು ಎದುರಿಸಿದ್ದೆ. ಚೆಸ್ ಬದುಕಿನ ಬದ್ಧತೆಯಿಂದಾಗಿ ರಷ್ಯಾ ಮತ್ತು ಹೊರದೇಶಗಳಲ್ಲಿ ನಾನು ಸಾಕಷ್ಟು ಕೆಲಸ ಮಾಡಬೇಕಾಯಿತು. ಆದರೆ ವಿಶ್ವ ಚಾಂಪಿಯನ್ ಆಗಿ ನನಗೆ ಸ್ವಂತವಾಗಿ ಏನೂ ಮಾಡಲಾಗಲಿಲ್ಲ.’

ಫಿಷರ್ ಚೆನ್ನಾಗಿ ಆಡಿದರೇ ಎಂಬ ಪ್ರಶ್ನೆಗೆ ಸ್ಪಾಸ್ಕಿ ನೀಡಿದ ಉತ್ತರ: ‘ಹೌದು. ಅವರು ನನ್ನನ್ನು ಸಮರ್ಥವಾಗಿ ಸೋಲಿಸಿದರು. ಅವರು ಉತ್ತಮ ಆಟಗಾರ.’ ‘ಆದರೆ ನನಗೆ ಬೇಸರ ಮೂಡಿಸಿದ ಒಂದೇ ಸಂಗತಿ ಎಂದರೆ ಅವರು ಸರಿಯಾದ ಸಮಯಕ್ಕೆ ಬಂದು ಆಡಲು ನಿರಾಕರಿಸಿದ್ದು. ಅವರು ಎರಡನೇ ಪಂದ್ಯ ಆಡಲು ಬರದೇ ಇದ್ದುದು ನನಗೆ ಇಷ್ಟವಾಗಲಿಲ್ಲ.’

ಶತಮಾನದ ಹಣಾಹಣಿ ಗೆದ್ದ ಫಿಷರ್, 1975ರಲ್ಲಿ ಚಾಂಪಿಯನ್‌ಷಿಪ್ ಉಳಿಸಿಕೊಳ್ಳುವ ಹೋರಾಟದಲ್ಲಿ ಆಡಲು ನಿರಾಕರಿಸಿದ್ದರಿಂದ ರಷ್ಯಾದ ಅನತೋಲಿ ಕಾರ್ಪೋವ್ ಅವರಿಗೆ ವಿಶ್ವ ಚಾಂಪಿಯನ್ ಪಟ್ಟ ಅನಾಯಾಸವಾಗಿ ಒಲಿಯಿತು.

ಸ್ಪಾಸ್ಕಿ–ಫಿಷರ್ ವೈಯಕ್ತಿಕವಾಗಿ ಉತ್ತಮ ಸಂಬಂಧ ಹೊಂದಿದ್ದರು. 20 ವರ್ಷಗಳ ನಂತರ (1992) ಯುಗೋಸ್ಲಾವಿಯಾದಲ್ಲಿ ಸೌಹಾರ್ದ ಪಂದ್ಯವಾಡಲು ಇವರಿಬ್ಬರು ಮತ್ತೆ ಮುಖಾಮುಖಿಯಾಗಿದ್ದರು. ಆದರೆ ಇಬ್ಬರ ಆಟದಲ್ಲೂ ಹಿಂದಿನ ಮೊನಚು ಕಾಣಬರಲಿಲ್ಲ. ಫಿಷರ್ 2008ರಲ್ಲಿ ನಿಧನರಾದರು. ಈಗ ಸ್ಪಾಸ್ಕಿಯೂ ಗೆಳೆಯನನ್ನು ಹಿಂಬಾಲಿಸಿದ್ದಾರೆ.


ಪ್ರತಿಕ್ರಿಯಿಸಿ: feedback@sudha.co.in

## ಆಟಗಾರರಿಗೆ ಸ್ಫೂರ್ತಿ....



‘ಅವರು ಕಿರಿಯ ಆಟಗಾರರಿಗೆ ಮಾರ್ಗದರ್ಶನ ನೀಡಲು ಎಂದೂ ಹಿಂಜರಿಯಲಿಲ್ಲ. ಸೋವಿಯತ್ ಶೈಲಿಯ ಚೆಸ್ ವ್ಯವಸ್ಥೆಗೆ ಹೊಂದಿಕೊಳ್ಳಲು ಅವರು ಕಷ್ಟಪಟ್ಟರು. 1972ರ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಬಾಬಿ ಫಿಷರ್ ಅನೇಕ ಬೇಡಿಕೆಗಳನ್ನು ಮುಂದಿಟ್ಟರೂ, ಅವರು ವಿಚಲಿತರಾಗದೇ ಆಟದ ಮೇಲಷ್ಟೇ ಗಮನ ಇಟ್ಟರು. ಫಿಷರ್ ನಡೆಸಿದ ‘ಕಸರತ್ತಿನ’ ಮಧ್ಯೆ ಸ್ಪಾಸ್ಕಿ ಪರಿಸ್ಥಿತಿಯನ್ನು ನಿಭಾಯಿಸಿದ ರೀತಿ ಸ್ಫೂರ್ತಿಯುತವಾದುದು’ ಎಂದಿದ್ದಾರೆ ಮಾಜಿ ವಿಶ್ವ ಚಾಂಪಿಯನ್, ರಷ್ಯಾದ ದಿಗ್ಗಜ ಗ್ಯಾರಿ ಕ್ಯಾಸ್ಪರೋವ್.

ಸ್ಪಾಸ್ಕಿ (88) ಅವರು ನಿಧನರಾಗುವ ಮೊದಲು ಅತಿ ಹಿರಿಯ ಮಾಜಿ ವಿಶ್ವ ಚಾಂಪಿಯನ್ ಆಗಿದ್ದರು. ಈಗ ಆ ‘ಗೌರವ’ ಅದೇ ದೇಶದ ಮಾಜಿ ವಿಶ್ವ ಚಾಂಪಿಯನ್, 73 ವರ್ಷ ವಯಸ್ಸಿನ ಅನತೋಲಿ ಕಾರ್ಪೋವ್ ಅವರಿಗೆ ಸಲ್ಲಲಿದೆ.



1992ರಲ್ಲಿ ತಮ್ಮ ಮೊದಲ ಪಂದ್ಯಾರಂಭದಲ್ಲಿ ಫಿಷರ್ ಅವರ ಹಸ್ತಲಾಘವ ಮಾಡಿದ ಸ್ಪಾಸ್ಕಿ